ಚರ್ಚೆಯಾಗುವಂಥ ರೀತಿನೀತಿಗಳನ್ನು ನೋಡಿದಾಗ ಒಂದು ರೀತಿ ಅಧಿಕಾರಿಗಳಿಗೂ, ಚುನಾಯಿತ ಪ್ರತಿನಿಧಿಗಳಿಗೂ ಏನು ಸಂಬಂಧ ಇಲ್ಲ ಎಂದು ಒಂದು ಅಡ್ಡಗೋಡೆಯನ್ನು ಹಾಕುವಂಥ ಸಂದರ್ಭ ಬಂದಿದೆ, ಅದನ್ನು ತಾವು ಗಮನಿಸಿದ್ದೀರಾ, ಆದರೆ ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೋಸ್ಕರ ಹೇಳುತ್ತಿದ್ದೇವೆಯೇ ಹೊರತು ನಮ್ಮ ಸ್ವಂತಕ್ಕಾಗಿ ಏನೇ ಸವಲತ್ತುಗಳನ್ನು ಕೇಳುತ್ತಿಲ್ಲ ಏನು ಇದುವರೆಗೂ ನಡೆದುಕೊಂಡು ಬಂದ ಒಂದು ಪದ್ಧತಿಯಂತೆ ಹಿಂದಿನ ಸರ್ಕಾರದಲ್ಲಿ ಶಾಸಕರುಗಳಿಗೆ ಏನು ಜವಾಬ್ದಾರಿ ಇತ್ತು ಅದನ್ನು ಮುಂದುವರಿಸಿಕೊಂಡು ಹೋಗುವಂಥ ಕೆಲಸವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು ಅದರ ಬಗ್ಗೆ ಅವರು ಸ್ಪಷ್ಟೀಕರಣ ನೀಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಯವರು) : ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ದಿನಾಂಕ 20ನೇ ಮಾರ್ಚ್ 1995ರಂದು ನೀಡಿದಂಥ ಭಾಷಣದ ಮೇಲೆ ಸುಮಾರು ಐದು ದಿನಗಳ ಕಾಲ ಚರ್ಚೆಯಾಗಿದೆ, 27 ಜನ ಗೌರವಾನ್ವಿತ ಸದಸ್ಯರುಗಳು ಇದರಲ್ಲಿ ಭಾಗವಹಿಸಿದ್ದಾರೆ ....

ಶ್ರೀ ವಾಟಾಳ್ ನಾಗರಾಜ್ : ತಾವು ನಮ್ಮ ಮನವಿಗೆ ಸ್ಪಂಧಿಸಲಿಲ್ಲ ಎಂದು ಕಾಣುತ್ತೆ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಈ ಸಂದರ್ಭದಲ್ಲಿ ಅವರೆಲ್ಲರಿಗೂ ನನ್ನ ವತಿಯಿಂದ ಹಾಗೂ ಸರ್ಕಾರದ ವತಿಯಿಂದ ಅವರಿಗೆ ಧನ್ಯವಾದಗಳನ್ನು ಅರ್ಪಿಸುವುದಕ್ಕೆ ಇಚ್ಛಿಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ನಾಲ್ಕು ತಿಂಗಳು ಕೂಡ ಆಗಿಲ್ಲ, ಇನ್ನೂ ಮೂರು ದಿವಸಗಳು ಬೇಕು ನಾಲ್ಕು ತಿಂಗಳು ಆಗುವುದಕ್ಕೆ. ಈ ನಾಲ್ಕು ತಿಂಗಳಿನಲ್ಲಿ ನಾವೇನು ....

ಶ್ರೀ ವಾಟಾಳ್ ನಾಗರಾಜ್ : ತಮ್ಮ ಮೂಲಕ ಅವರಿಗೆ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ....

ಶ್ರೀ ಹೆಚ್.ಡಿ. ದೇವೇಗೌಡ : ದಯಮಾಡಿ ಕುಳಿತುಕೊಳ್ಳುತ್ತೀರಾ, ಹಾಗೆ ಷರತ್ತಾಗಿ ಭಾಷಣ ಮಾಡಲಿಕ್ಕೆ ಆಗುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ.ಯ ವಿರೋಧಪಕ್ಷದ ನಾಯಕರುಗಳು ಮತ್ತು ಸದಸ್ಯರು ಹಾಗೂ ಇನ್ನೀತರೆ ಕೆಲವು ಪಕ್ಷೇತರ ಸದಸ್ಯರುಗಳು ಶಾಸಕರ ಹಕ್ಕಿನ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಒತ್ತಾಯಿಸಿ ಸದನದ ಬಾವಿಗೆ ಬಂದು ಧರಣಿ ಕುಳಿತರು)

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಾವು ತಮ್ಮ ಮುಂದೆ ಮನವಿ ಮಾಡಿಕೊಂಡಿದ್ದೇವೆ.

ಅಧ್ಯಕ್ಷರು : ತಾವು ಹೇಳಿದ್ದೀರಿ. ನಾನು ತಮ್ಮ ಮಾತನ್ನು ಕೇಳಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು. ಶ್ರೀಮಾನ್ ಯಡಿಯೂರಪ್ಪನವರೂ ಮಾತನಾಡಿದ್ದಾರೆ. ಅವೆಲ್ಲವನ್ನೂ ಕೇಳಿದ್ದೇನೆ. ಅವರು ಉತ್ತರವನ್ನು ಪ್ರಾರಂಭ